## ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹೊನ್ನಾಳಿ

**ಸಿ.ಸಿ. ನಂಃ 399 ಃ 2016**

ಸರ್ಕಾರ ಃ ವಿರುದ್ಧ ಆರೋಪಿಃ- ಶ್ರೀ.ಅರುಣ್ ಕುಮಾರ ಯಾನೆ ರಘು ಮತ್ತು ಇತರರು

### ದೋಷಾರೋಪಣೆ

ನಾನು ಶ್ರೀ.ದೀಪಕ್ ಪಾಟೀಲ್, ಬಿ.ಎಸ್ಸಿ., ಎಲ್.ಎಲ್.ಬಿ., ಹೆಚ್ಚುವರಿ ಪ್ರ.ದ.ನ್ಯಾ.ದಂ., ಹೊನ್ನಾಳಿ.

ಆರೋಪಿತರಾದ ನೀವು

1. ಶ್ರೀ.ಅರುಣ್‌ಕುಮಾರ್ ಯಾನೆ ರಘು ಬಿನ್ ಹುಚ್ಚಪ್ಪ,
   32 ವರ್ಷ, ಚಾಲಕ,
   ವಾಸಃ ರವಿವರ್ಮ ಬೀದಿ, ಸಾಮಿಲ್ ಹತ್ತಿರ,
   ಶಿವಮೊಗ್ಗ, ಶಿವಮೊಗ್ಗ ತಾಲ್ಲೂಕು.
2. ಶ್ರೀ.ಧರ್ಮ ಯಾನೆ ಧರ್ಮಪ್ಪ ಬಿನ್ ಅಮಾವಾಸ್ಯ,
   44 ವರ್ಷ, ವ್ಯವಸಾಯ.
   ವಾಸಃ ಕುಂಚೇನಹಳ್ಳಿ, ಗ್ರಾಮ, ಶಿವಮೊಗ್ಗ ತಾಲ್ಲೂಕು.
3. ಶ್ರೀ.ಇಸ್ಮಾಯಿಲ್ ಬಿನ್ ರಫೀಕ್,
   37 ವರ್ಷ, ಕೂಲಿಕೆಲಸ.
   ವಾಸಃ ಟಿಪ್ಪುನಗರ, 5ನೇ ಕ್ರಾಸ್, ಶಿವಮೊಗ್ಗ,
   ಶಿವಮೊಗ್ಗ ತಾಲ್ಲೂಕು.
4. ಶ್ರೀ.ಪತಿನಾಯ್ಕ್ ಬಿನ್ ಲಿಂಗಾನಾಯ್ಕ,
   32 ವರ್ಷ, ವ್ಯವಸಾಯ.
   ವಾಸಃ ಕುಂಚೇನಹಳ್ಳಿ, ಗ್ರಾಮ, ಶಿವಮೊಗ್ಗ ತಾಲ್ಲೂಕು,
5. ಶ್ರೀ.ಮಂಜಾನಾಯ್ಕ ಯಾನೆ ಮಂಜ ಬಿನ್ ಅಣ್ಣಾನಾಯ್ಕ,
   33 ವರ್ಷ, ಚಾಲಕ.
   ವಾಸಃ ಹಾರೋಬೆನ್ನವಹಳ್ಳಿ, ತಾಂಡ, ಶಿವಮೊಗ್ಗ ತಾಲ್ಲೂಕು,

ಎಂಬುವವರ ಮೇಲೆ ಆಪಾದನೆ ಹೊರಿಸುವುದೇನೆಂದರೆ,

ದಿನಾಂಕಃ 29-12-2015 ರಂದು ಬೆಳಗಿನ ಜಾವ 1-30 ಗಂಟೆ ಸಮಯದಲ್ಲಿ 1 ರಿಂದ 5ನೇ ಆರೋಪಿತರಾದ ನೀವು ಕೆಎ-16-ಎ-2588 ನೇ ಸ್ವರಾಜ್ ಮಜಡಾ ಲಾರಿ ಮತ್ತು ಕೆಎ-14-ಇಬಿ-5483ನೇ ಮೋಟಾರ್ ಸೈಕಲ್‌ನಲ್ಲಿ ಹೊನ್ನಾಳಿ ತಾಲ್ಲೂಕು ಸವಳಂಗ

ಗ್ರಾಮದ ಸಾಕ್ಷಿ-1 ಬಿ.ವಿರೂಪಾಕ್ಷಪ್ಪರವರು ಬಾಡಿಗೆಗೆ ಪಡೆದು ಅಡಿಕೆ ಚೀಲಗಳನ್ನು ದಾಸ್ತಾನು ಮಾಡಿದ್ದ ಗೋಡೌನ್‌ನ ಹತ್ತಿರ ಹೋಗಿ ಗೋಡೌನ್‌ನ ಬಾಗಿಲಿಗೆ ಹಾಕಿದ್ದ ಬೀಗವನ್ನು 3ನೇ ಆರೋಪಿತ ಇಸ್ಮಾಯಿಲ್‌ರಾದ ನೀವು ಕಬ್ಬಿಣದ ರಾಡ್‌ನಿಂದ ಹೊಡೆದು ಬಾಗಿಲನ್ನು ತೆಗೆದು 1 ರಿಂದ 5ನೇ ಆರೋಪಿ ಅರುಣ್‌ಕುಮಾರ್, ಧರ್ಮ, ಇಸ್ಮಾಯಿಲ್, ಪತಿನಾಯ್ಕ ಮತ್ತು ಮಂಜಾನಾಯ್ಕರಾದ ನೀವು ಗೋಡೌನ್‌ನ ಒಳಗೆ ಅಕ್ರಮ ಪ್ರವೇಶ ಮಾಡಿರುತ್ತೀರಿ. ಆ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ 457 ರಡಿಯಲ್ಲಿ ಶಿಕ್ಷಿಸಲ್ಪಡುವಂತಹ ಅಪರಾಧವನ್ನು ನನ್ನ ಸಂಜ್ಞಾನದೊಳಗೆ ಎಸಗಿರುತ್ತೀರಿ.

ಎರಡನೇಯದಾಗಿ ಮೇಲಿನ ದಿನ ಸ್ಥಳ ಹಾಗೂ ವೇಳೆಯಂದು 1 ರಿಂದ 5ನೇ ಆರೋಪಿ ಅರುಣ್‌ಕುಮಾರ್, ಧರ್ಮ, ಇಸ್ಮಾಯಿಲ್, ಪತಿನಾಯ್ಕ ಮತ್ತು ಮಂಜಾನಾಯ್ಕರಾದ ನೀವು ಗೋಡೌನ್‌ನ ಒಳಗೆ ಅಕ್ರಮ ಪ್ರವೇಶ ಮಾಡಿ ಗೋಡೌನ್‌ನಲ್ಲಿ ದಾಸ್ತಾನು ಮಾಡಿದ್ದ ಅಡಿಕೆ ಚೀಲಗಳಲ್ಲಿ ಸುಮಾರು 8,48,250-00 ರೂ ಬೆಲೆ ಬಾಳುವ ತಲಾ 75 ಕೆಜಿ ತೂಕದ ಒಟ್ಟು 29 ಕ್ವಿಂಟಾಲ್. [illegible] ಇರುವ 39 ಅಡಿಕೆ ಚೀಲಗಳನ್ನು ಕಳ್ಳತನ ಮಾಡಿಕೊಂಡು ಹೋಗಿ 2ನೇ ಆರೋಪಿ ಧರ್ಮರವರಾದ ನಿಮ್ಮ ತೋಟದ ಮನೆಯಲ್ಲಿ 29 ಚೀಲಗಳನ್ನು ಇಟ್ಟು 10 ಚೀಲಗಳನ್ನು ತಮ್ಮ ತೋಟದಲ್ಲಿ ಬಚ್ಚಿಟ್ಟಿರುತ್ತೇವೆ ಎಂದು ಸಾಕ್ಷಿ-11 ಮೊಹಮ್ಮದ್ ಇಕ್ಬಾಲ್‌ರವರಿಗೆ ಮಾರಾಟ ಮಾಡಿರುತ್ತೀರಿ. ಆ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ 380 ರಡಿಯಲ್ಲಿ ಶಿಕ್ಷಿಸಲ್ಪಡುವಂತಹ ಅಪರಾಧವನ್ನು ನನ್ನ ಸಂಜ್ಞಾನದೊಳಗೆ ಎಸಗಿರುತ್ತೀರಿ.

ಈ ಮೇಲೆ ತಿಳಿಸಿದ ಆರೋಪಗಳ ವಿಚಾರಣೆಯು ಇದೇ ಕೋರ್ಟಿನ ಅಧಿಕಾರ ವ್ಯಾಪ್ತಿಯಲ್ಲಿರುವುದರಿಂದ ವಿಚಾರಣೆಯಾಗಲು ಆದೇಶಿಸಿದ್ದೇನೆ.

ದಿನಾಂಕ: 13/10/2016

13/10

ಹೆಚ್ಚುವರಿ ಪ್ರ.ದ.ನ್ಯಾ.ದಂ., ಹೊನ್ನಾಳಿ.

ಪ್ರಶ್ನೆ: 1 ಮೇಲೆ ಓದಿ ಹೇಳಿದ ನಿಮ್ಮಗಳ ಮೇಲೆ ಮಾಡಿರುವ ಆರೋಪಗಳು ತಿಳಿಯಿತೇ?

ಉತ್ತರ: ತಿಳಿಯಿತು

ಪ್ರಶ್ನೆ: 2 ಸದರಿ ಆರೋಪಗಳನ್ನು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೇ?

ಉತ್ತರ: ಇಲ್ಲ. ವಿಚಾರಣೆಯಾಗಬೇಕು.

ಆರೋಪಿ ನಂ.1) Arunkumar

ಆರೋಪಿ ನಂ.2)

ಆರೋಪಿ ನಂ.3)

ಆರೋಪಿ ನಂ.4)

ಆರೋಪಿ ನಂ.5)

ದಿನಾಂಕ: 13/10/2016

13/10

ಹೆಚ್ಚುವರಿ ಪ್ರ.ದ.ನ್ಯಾ.ದಂ., ಹೊನ್ನಾಳಿ.